**ಸಾಕ್ಷಿಯನ್ನು ದಿಃ *15/12/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು ಃ ಶ್ರೀ ಜಿಎಸಎಸ ವಕೀಲರಿಂದ ವಾದಿ ಪರವಾಗಿ.***

ಆರ್.ಎಸ್.ನಂ. 74/1, 74/2 ಮತ್ತು 112 ಜಮೀನುಗಳು ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ, ಸದರಿ ಆಸ್ತಿಗಳು ನನ್ನ ಮುತ್ತಜ್ಜನಾದ ಚಂದ್ರಪ್ಪನಿಂದ ಬಂದ ಆಸ್ತಿಗಳು ಎಂದ ಸಾಕ್ಷಿದಾರರು ಸ್ವತ ಹೇಳುತ್ತಾರೆ. ಮಿಕ್ಕಿದ ದಾವಾದಾಸ್ತಿಗಳು ನಮ್ಮ ಮನೆತನಕ್ಕೆ ಹೇಗೆ ಬಂದವು ಎಂಬ ಪ್ರಶ್ನೆಗೆ ಸಾಕ್ಷಿದಾರರು 23/ಎರನ್ನು ಹೊರತುಪಡಿಸಿ ಮಿಕ್ಕಿದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಉತ್ತರಿಸುತ್ತಾರೆ.

ಪಟ್ಟಣ ಪಂಚಾಯತ ನಂ.1902 ಇದು ಈಶ್ವರ ಮತ್ತು ಇವರ ಅಕ್ಕ ತಂಗಿಯರ ಸ್ವಾಧೀನತೆಯಲ್ಲಿ, 1903 ಇದು ವಾದಿಯರ ಸ್ವಾಧೀನತೆಯಲ್ಲಿರುತ್ತದೆ ಎಂದರೆ ನಿಜ. ಅದರಂತೆ 1923/ಎ ಇದು ಸಹ ಈಶ್ವರ ಮತ್ತು ಅವರ ಅಕ್ಕ ತಂಗಿಯರ ಸ್ವಾಧೀನತೆಯಲ್ಲಿದೆ. 1922 ನರಸಿಂಗಪ್ಪ ಪಿರೋಜಿ ಇವರ ಸ್ವಾಧೀನತೆಯಲ್ಲಿರುತ್ತದೆ. ಸದರಿ ಮನೆಯ ದಕ್ಷಿಣ ಭಾಗದ ಉತ್ತರ ದಕ್ಷಿಣಕ್ಕೆ 40 ಪೂಟು ಪೂರ್ವಪಶ್ಚಿಮಕ್ಕೆ 12 ಪೂಟು ಇರುವ ಮನೆ ವಾದಿಯರ ಸ್ವಾಧೀನತೆಯಲ್ಲಿರುತ್ತದೆ ಎಂದರೆ ಸರಿಯಲ್ಲ. 1922 ರ ಮನೆ 1903 ಮನೆಗೆ ಹೊಂದಿಕೊಂಡು ತಾಗಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮತ್ತು ವಾದಿಯರ ಸ್ವಾಧೀನತೆಯಲ್ಲಿರುವ ಮನೆಗಳಿಗೆ ಹೊಲಿಸಿದರೆ, ಪ್ರತಿವಾದಿಗಳ ಮನೆ ಹೆಚ್ಚಿನ ಕ್ಷೇತ್ರದ್ದು ಇರುತ್ತದೆ ಎಂದರೆ ಕ್ಷೇತ್ರ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮನೆಗಳಲ್ಲಿ ಈಗಾಗಲೇ ಅಪಸಾತ ವಾಟ್ನಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಸಾತ ವಾಟ್ನಿಯಲ್ಲಿ ಯಾರು ಹಿರಿಯರು ಇದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಯಾರು ಹಿರಿಯರು ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ವಾಟ್ನಿಯಾಗಿರುವ ಕುರಿತು ದಾಖಲೆಗಳು ಇವೆ. ಸದರಿ ದಾಖಲೆಗಳು ಎಂದರೆ ವಾಟ್ನಿಯಾದ ನಂತರ ಸಂಬಂಧಿತ ಇಲಾಖೆಗಳಲ್ಲಿ ಮಾಡಿರುವ ಕ್ರಮ ಕುರಿತು ಇರುತ್ತವೆ. ಈ ರೀತಿ ಮುನ್ಸಿಪಾಲಿಟಿಗೆ ದಾಖಲೆಗಳು ಕೊಟ್ಟು ಕ್ರಮ ಕೈಗೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2021 ನೇ ಇಸ್ವಿಯಲ್ಲಿ ವಾದಿಯರು ತಮ್ಮ ಹಿಸ್ಸೆಯ ಪಾಲನ್ನು ಪ್ರತಿವಾದಿಯರಿಗೆ ಕೇಳಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಪಾರ್ವತೆವ್ವ ಬೆಂಗಳೂರಿನಲ್ಲಿ ತೀರಿಹೋಗಿರುತ್ತಾರೆ. ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು. ಸದರಿಯವರಿಗೆ ಸಂಬಂಧಿಸಿದ ವಾರಸಾ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಇಲ್ಲವೊ ನನಗೆ ನೆನಪು ಬರುತ್ತಿಲ್ಲ. ಪ್ರತಿವಾದಿ ನಂ.2 ಇವರು ದಾವೆ ಮಾಡುವ ಮುಂಚಿತವಾಗಿ ತೀರಿಹೋಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣಪತ್ರದಲ್ಲಿ ಹೇಳಿದ ಹಾಗೇ ದಾವಾ ಜಮೀನಾದ ಆರ್.ಎಸ್.ನಂ. 74/1 ಮತ್ತು 2 ರಲ್ಲಿ ಮಾವಿನ ಗಿಡಗಳು ಇರುವ ಸಂಗತಿ ನಿಜವಿರುತ್ತವೆ. ಈ ರೀತಿ ಆರ್.ಎಸ್.ನಂ. 74/1 ರಲ್ಲಿ 39 ಮಾವಿನ ಗಿಡಗಳು ಇವೆ. ಅದರಂತೆ 74/2 ರಲ್ಲಿ 7 ಮಾವಿನ ಗಿಡಗಳು ಇರುತ್ತವೆ. ಎರಡು ಜಮೀನುಗಳಲ್ಲಿ ಕೇವಲ 39 ಮಾತ್ರ ಮಾವಿನ ಗಿಡಗಳು ಇವೆ ಎಂದರೆ ಸರಿಯಲ್ಲ. ವಾದಿಯರಿಗೆ 39 ಮಾವಿನ ಗಿಡಗಳ ಇರುತ್ತವೆ. ಪ್ರತಿವಾದಿಯರಿಗೆ 7 ಮಾವಿನ ಗಿಡಗಳು ಇರುತ್ತವೆ. ಈ ಕುರಿತು ದಾಖಲೆ ಕೊಟ್ಟಿರುತ್ತೇನೆ, ಅವುಗಳು ಛಾಯಾಚಿತ್ರಗಳು ಮತ್ತು ಸಂಬಂಧಿತ ಕಚೇರಿ ದಸ್ತಾವೇಜುಗಳು ಇರುತ್ತವೆ. ಈ ಹೇಳಿಕೆಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜಮೀನುಗಳು ಮತ್ತು ಮನೆಗಳು ಏಕ ಸಮಯಕ್ಕೆ ಪಾಲಾಗಿವೆ ಅಥವಾ ಬೇರೆ ಬೇರೆ ಸಮಯಗಳಲ್ಲಿ ಪಾಲಾಗಿವೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮನೆಗಳು ಮೊದಲು ಅಂದರೆ 1963 ರಲ್ಲಿ ಪಾಲಾಗಿರುತ್ತವೆ, ನಂತರ ಕೆಲವು ದಿನಗಳ ನಂತರ ಅಂದರೆ 1965 ರಲ್ಲಿ ಜಮೀನುಗಳು ಪಾಲು ಆಗಿವೆ ಎಂದು ಉತ್ತರಿಸುತ್ತಾರೆ. ವಾದಿ ಬಸವಣ್ಣೆಪ್ಪ ಇವರ ಹಿಸ್ಸೆಗೆ ಕಡಿಮೆ ಕ್ಷೇತ್ರದ ಮನೆ ಬಂದಿತ್ತು ಎಂದರೆ ಸರಿಯಲ್ಲ. ವಾದಿಯರು ಯಾರ ಹತ್ತಿರ ಬಾಡಿಗೆಗೆ ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ, ಸದರಿ ಸಂಗತಿ ಅವರಿಗೆ ಗೊತ್ತು. ಈ ರೀತಿ 1962 ನೇ ಇಸ್ವಿ ನಂತರ ಇದ್ದರು, ಬಾಡಿಗೆ ವಿವರಗಳು ನನಗೆ ಗೊತ್ತಿಲ್ಲ. ಹಣದ ಅಡಚಣೆಯಿಂದ ಬಸವಣ್ಣೆಪ್ಪ ಇತನು ಈರಪ್ಪನ ಹತ್ತಿರ ಬಂದು ಇರಲು ಮನೆ ಕೊಡಬೇಕೆಂದು ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 1903 ರ ಮನೆಯಲ್ಲಿ ಸದರಿ ಬಸವಣ್ಣೆಪ್ಪ ವಾಸ ಮಾಡಲು ಪ್ರಾರಂಭಿಸಿದರು ಎಂದರೆ ನಿಜ. 1903 ರ ಮನೆ

ವಾದಿಯರಿಗೆ ವಾಟ್ನಿಯಲ್ಲಿ ಬಂದಿದ್ದು ಎಂದು ಹೇಳಿರುವ ವಿಷಯ ಸಂಗತಿ ನಿಜವಿರುತ್ತದೆ. ಈ ರೀತಿ ವಾಟ್ನಿಯಲ್ಲಿ ಬಂದಿದ್ದರೆ ಸದರಿ ಬಸವಣ್ಣೆಪ್ಪ ಈರಪ್ಪನಿಗೆ ಇರಲು ಮನೆ ಕೊಡಬೇಕೆಂದು ಕೇಳುವ ಪ್ರಶ್ನೆಯೇ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

1923/ಎ ಮನೆಯ ಖುಲ್ಲಾ ಜಾಗೆಯನ್ನು 1972 ರಲ್ಲಿ ಈರಪ್ಪ ಜಕಾತಿ ಇವರು ಖರೀದಿ ಮಾಡಿರುತ್ತಾರೆ, ಸದರಿ ಮನೆ ಖರೀದಿ ಮಾಡುವಾಗ ಖುಲ್ಲಾ ಜಾಗೆ ಇದ್ದು, ನಂತರ ವಾದಿಯರು ಅತಿಕ್ರಮಣ ಮಾಡಿ ಅದರಲ್ಲಿ ಮನೆ ಕಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ವಾದಿಯರು 2009 ನೇ ಇಸ್ವಿಯಲ್ಲಿ ಮನೆ ಕಟ್ಟಿರುತ್ತಾರೆ. ಈ ರೀತಿ ಮನೆ ಕಟ್ಟುವಾಗ ನಾವುಗಳ ತಕರಾರು ಮಾಡಿರುತ್ತೇವೆ, ಸಂಬಂಧಿತ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಈ ಕುರಿತು ಪೊಲೀಸರಿಗೆ ದೂರನ್ನು ಸಹ ನೀಡಿರುತ್ತೇನೆ. ಆಗ ಪೊಲೀಸರು ಬಂದು ವಾದಿಯರನ್ನು ಹೊರಗೆ ಹಾಕಿದರು. ನಂತರ ನ್ಯಾಯಾಲಯದ ತಡೆಯಾಜ್ಞೆ ರದ್ದಾದ ನಂತರ ಪುನಃ ವಾದಿಯರು ಬಂದು ಅದರಲ್ಲಿ ವಾಸ ಮಾಡಲು ಪ್ರಾರಂಭಿಸಿದರು. ಸದರಿ ಮನೆ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ವಾದಿಯರ ಪಾಲಿಗೆ ಕಡಿಮೆ ಕ್ಷೇತ್ರ ಇರುವ ಜಾಗೆ ಬಂದ ಕಾರಣ ಮಿಕ್ಕಿದ ಜಾಗೆ ಅವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ರೀತಿ 1903 ಮತ್ತು 1923/ಎ ಎರಡು ಕೂಡಿಯೇ ವಾದಿಯರ ಮನೆ ಇರುತ್ತದೆ ಎಂದರೆ ಸರಿಯಲ್ಲ. 1923/ಎ ಖುಲ್ಲಾ ಜಾಗೆ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಈಗಾಗಲೇ ವಾದಿಯರು ಅತಿಕ್ರಮಣ ಮಾಡಿ ಮನೆ ಕಟ್ಟಿರುತ್ತಾರೆ ಎಂದು ಹೇಳಿರುತ್ತೇನೆ ಎಂದು ಉತ್ತರಿಸುತ್ತಾರೆ.

ಅಸಲು ದಾವೆ ನಂ.330/2008 ರನ್ನು ಪ್ರಸ್ತುತ ಪ್ರತಿವಾದಿಯರು ವಾದಿಯರ ವಿರುದ್ದ ಹೂಡಿದ್ದು ಇರುತ್ತದೆ ಎಂದರೆ ನಿಜ. ಸದರಿ ದಾವೆ ಅತಿಕ್ರಮಣ ಮಾಡಿ ಮನೆ ಕಟ್ಟಿದಕ್ಕೆ ಮತ್ತು ಮನೆ ಗೋಡೆಗಳು ಡ್ಯಾಮೇಜ ಆಗಿದಕ್ಕೆ ಪರಿಹಾರ ಹಣ ಕೇಳಿ ಹೂಡಿದ್ದು ಇರುತ್ತದೆ. ಸದರಿ ದಾವೆ ಅತಿಕ್ರಮಣವಾಗಿಲ್ಲ ಮತ್ತು ಪರಿಹಾರ ಹಣಕ್ಕೆ ಅರ್ಹರಲ್ಲ ಎಂದು ಆದೇಶ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ಆದೇಶದ ವಿರುದ್ದ ಮೇಲ್ಮನವಿ ಆರ್.ಎ.ನಂ.24/2022 ಸಲ್ಲಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ಸದರಿ ಮೇಲ್ಮನವಿ ಯಾವ ನ್ಯಾಯಾಲಯದಲ್ಲಿ ಚಾಲ್ತಿಯಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಾದಿಯರು ಸಲ್ಲಿಸಿರುತ್ತಾರೆ ಹೊರತು ಪ್ರತಿವಾದಿಯರು ಅಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ

ವಾದಿ, ಪ್ರತಿವಾದಿಯರ ಮಧ್ಯ ಯಾವುದೇ ರೀತಿ ವಾಟ್ನಿಯಾಗಿಲ್ಲ, ಹೀಗಿದ್ದರೂ ಸಹ ಸುಳ್ಳು ಪ್ರತಿವಾದ ಪತ್ರದ ಮೂಲಕ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಎಲ್ಲ ಸಲಹೆಗಳು ಸರಿಯಲ್ಲ.

ವಾದಿಯರ ಸಲ್ಲಿಸಿರುವ ಅಸಲು ದಾವೆ ನಂ.423/2012 ರಲ್ಲಿ ವಾದಿಯರಿಗೆ ಪಾಲು ಕೊಡಬೇಕೆನ್ನುವ ಅಂತಿಮ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.